

ಭಿನ್ನ ಮನೋಧರ್ಮದವರು ಒಟ್ಟಿಗೆ ಸೇರಿ ನಡೆಸುವ ಹರಟೆ ಮನರಂಜನೆಯಷ್ಟೇ ಅಲ್ಲ, ಮನೋವಿಕಾಸಕ್ಕೂ ಪೂರಕ.

ತಮ್ಮ ಅನಿಸಿಕೆಯನ್ನಾಗಲಿ, ವಿಮರ್ಶೆಯನ್ನಾಗಲಿ ಹೇಳುವವರ ಮೇಲೆ ಹೇರುವುದಿಲ್ಲ. ತಮ್ಮ ಅನುಭವ ಕಥನ ಹೇಳಿಕೊಳ್ಳುವವರು ಕೇಳುಗರಿಂದ ಯಾವುದೇ ರೀತಿಯ ಅನುಕಂಪ ಅಥವಾ ಪರಿಹಾರ ಬಯಸುವುದಿಲ್ಲ. ಅವರಿಗೆ ಮುಖ್ಯವಾಗಿ ಬೇಕಾಗಿರುವುದು ಕೇಳುವ ಕಿವಿಗಳು ಮಾತ್ರ. ಹಾಗಾಗಿ ಆಲಿಸುವ ಕ್ರಿಯೆಗೆ ಮಾತ್ರ ಮಹತ್ವ ಕೊಡಲಾಗುತ್ತದೆ. ಸಾಮಾನ್ಯವಾಗಿ ಕುಟುಂಬ ಮತ್ತು ಸ್ನೇಹಿತರ ವಲಯದೊಳಗೆ ಒಬ್ಬರಿಗೊಬ್ಬರ ಬದುಕಿನ ಬಗ್ಗೆ ಪ್ರಶ್ನೆ, ಕೌತುಕ, ಅನುಮಾನಗಳು ಉದ್ಭವಿಸಿ ಅವರ ವ್ಯಕ್ತಿತ್ವವನ್ನೇ ವಿಮರ್ಶಾತ್ಮಕವಾಗಿ ನೋಡಲಾಗುತ್ತದೆ. ಆದರೆ ರಿಟ್ರೀಟ್‌ನಲ್ಲಿ ಯಾರದೇ ವೈಯಕ್ತಿಕ ಕಥೆಗಳೂ ಅವರು ಹಾಕಿಕೊಂಡ ಬೇಲಿಯಿಂದ ಹೊರಬಂದರೂ ಈ ಒಂದು ವರ್ತುಲದಲ್ಲೇ ಗೌಪ್ಯವಾಗಿದ್ದು **non judgemental** ಆಗಿರುತ್ತದೆ. ಆ ಒಂದು ನಂಬಿಕೆಯಿಂದಲೇ ಪ್ರತಿಯೊಬ್ಬರೂ ಸಂಪೂರ್ಣವಾಗಿ ತಮ್ಮ ಅಂತರಂಗವನ್ನು ತೆರೆದುಕೊಳ್ಳಲು ಸಾಧ್ಯವಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಮಾತುಗಳಿಗಿಂತಲೂ ಒಂದು ಅಪ್ಪುಗೆ ಹೆಚ್ಚು ಪರಿಣಾಮಕಾರಿ ಆಗಿರುತ್ತದೆ. ರಿಟ್ರೀಟ್ ಕಾರ್ಯಾಗಾರದಲ್ಲಿ ಸದಸ್ಯರು ಒಬ್ಬರನ್ನೊಬ್ಬರು ತಬ್ಬಿಕೊಂಡು ಸಾಂತ್ವನಗೊಳ್ಳುತ್ತಾರೆ. ಇದರಿಂದ ಅವರ ಮನಸ್ಸು ಕೂಡ ಹಗುರಾಗುತ್ತದೆ. ಪ್ರತಿಯೊಬ್ಬ ಹೆಣ್ಣಿನ

**‘ರಿಟ್ರೀಟ್’ ಎನ್ನುವುದು ಕಾಲಹರಣ ಅಥವಾ ಮನರಂಜನೆಗಷ್ಟೇ ಸೀಮಿತವಾದುದಲ್ಲ. ಇಲ್ಲಿನ ಮುಖ್ಯ ಉದ್ದೇಶ ಮನೋವಿಕಾಸ. ಸಮಾನ ಹಾಗೂ ಭಿನ್ನ ಮನಸ್ಕರೊಂದಿಗೆ ಬೆರೆತು ವಿಚಾರಗಳನ್ನು ಹಂಚಿಕೊಳ್ಳುವುದರಿಂದ ದೃಷ್ಟಿಕೋನ ವಿಶಾಲವಾಗುತ್ತದೆ; ಬದುಕಿನ ಅಪಾರ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.**

